**Sarvatrika Arogya Andolana, Karnataka (SAA-K)**
*(A people's campaign for Universal Health Systems)*
**Address:** #15, Byrappa Layout, 4th cross, Behind Shanimahatma temple, Nagashettihalli, Bangalore – 560094. Webiste – www.saakarnataka.org
Nisha Gulur: 9620889944, Akshay: 8123148720

**ದಿನಾಂಕ 11/12/2023**

ಸಾರ್ವತ್ರಿಕ ಆರೋಗ್ಯ ಆಂದೋಲನ–ಕರ್ನಾಟಕವು ಕಾರ್ಮಿಕ ಸಂಘಟನೆಗಳು (ಗಾರ್ಮೆಂಟ್ ಕಾರ್ಮಿಕರು, ಬೀಡಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಲೈಂಗಿಕ ಕಾರ್ಮಿಕರು, ಸಫಾಯಿ ಕಾರ್ಮಿಕರು), ಹಕ್ಕು ಆಧಾರಿತ ನಾಗರಿಕ ಸಂಘಟನೆಗಳು (ಮಹಿಳೆಯರು, ಅಂಗವಿಕಲರು, ಲಿಂಗತ್ವ ಅಲ್ಪಸಂಖ್ಯಾತರು, ಲೈಂಗಿಕ ಅಲ್ಪಸಂಖ್ಯಾತರು, ದುಡಿಯುವ ಜನರು) ಅರೋಗ್ಯ ಸಂಶೋಧಕರು, ಸಾಮಾಜಿಕ ಹೋರಾಟಗಾರರು ಮತ್ತು ಹಲವಾರು ಸಂಘಟನೆಗಳ ರಾಜ್ಯ ಮಟ್ಟದ ಒಕ್ಕೂಟವಾಗಿದೆ.

ದಿನಾಂಕ 11 ಡಿಸೆಂಬರ್ 2023 ರಂದು ಬೆಳಗಾವಿಯ ಸುವರ್ಣಸೌಧದ ಬಳಿ ಸಾರ್ವತ್ರಿಕ ಆರೋಗ್ಯ ಆಂದೋಲನ – ಕರ್ನಾಟಕ ವತಿಯಿಂದ ಪ್ರತಿಭಟನೆ ನಡೆಸುತ್ತಿದ್ದೇವೆ. ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳ ಸುಧಾರಣೆ, ಉಚಿತ ಔಷಧಿಯ ಲಭ್ಯತೆ, ಸಿಬ್ಬಂದಿ ಕೊರತೆಯನ್ನು ನೀಗಿಸುವುದು ಮತ್ತಿತರೆ ವಿಷಯಗಳಿಗಾಗಿ ನಾವು ನಡೆಸುತ್ತಿರುವ ಪ್ರತಿಭಟನೆಯ ಕುರಿತು:

**ನಮ್ಮ ಹಕ್ಕೊತ್ತಾಯಗಳು ಈ ಕೆಳಗಿನಂತಿವೆ:**

1) **<u>ಉಚಿತ ಔಷಧಿಗಳನ್ನು ನೀಡಬೇಕು:</u>** ಸರ್ಕಾರಿ ಅರೋಗ್ಯ ವ್ಯವಸ್ಥೆಗಳಿಗೆ (ನಮ್ಮ ಕ್ಲಿನಿಕ್ ಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಎಲ್ಲಾ ಮಟ್ಟದ ಆಸ್ಪತ್ರೆಗಳು) ಭೇಟಿ ನೀಡುವ ಪ್ರತಿ ವ್ಯಕ್ತಿಗೆ ಉಚಿತ ಔಷಧಿಗಳನ್ನು ನೀಡಬೇಕು ಮತ್ತು ಹೊರಗೆ ಔಷಧಿಗಳನ್ನು ಖರೀದಿಸಲು ಚೀಟಿ (ಪ್ರಿಸ್ಕ್ರಿಪ್ಷನ್ – prescription) ನೀಡಬಾರದು. ಔಷಧಿಗಳ ಖರೀದಿಗೆ ಮತ್ತು ಆರೋಗ್ಯ ಸೇವೆಗಳ ವೆಚ್ಚಕ್ಕೆ ಜನರು ತಮ್ಮ ಜೇಬಿನಿಂದ ಖರ್ಚು ಮಾಡುವ (ಔಟ್ ಆಫ್ ಪಾಕೆಟ್ – ಒಒಪಿ Out of Pocket – OOP) ಕಾರಣ ಐದೂವರೆ ಕೋಟಿ ಜನರು ಬಡತನಕ್ಕೆ ತಳ್ಳಲ್ಪಡುತ್ತಾರೆ. ಭಾರತದ ಹಲವಾರು ರಾಜ್ಯಗಳು ಉಚಿತ ಔಷಧಿಗಳನ್ನು ನೀಡುತ್ತಿವೆ. ಅವುಗಳಲ್ಲಿ ಮುಂಚೂಣಿಯಲ್ಲಿರುವ ತಮಿಳುನಾಡು, (https://www.tnmsc.tn.gov.in/) 1994ರಲ್ಲಿ ಟಿಎನ್ಎಂಎಸ್ಸಿ (TNMSC) ಯನ್ನು

ಸ್ಥಾಪಿಸಿತು ಮತ್ತು ಇತರೆ ರಾಜ್ಯಗಳಿಗೆ ಇದು ಯಶಸ್ವಿ ಮಾದರಿಯಾಗಿದೆ. ಇದನ್ನು ಅನುಸರಿಸಿ ಕೇರಳ (http://kmscl.kerala.gov.in/) ಮತ್ತು ರಾಜಸ್ಥಾನ (http://rmsc.health.rajasthan.gov.in/) ಈಗಾಗಲೇ ಇದನ್ನು ಅಳವಡಿಸಿವೆ ಮತ್ತು ಇದರಿಂದಾಗಿ ಒಒಪಿ (OOP) ವೆಚ್ಚ ಕಡಿಮೆಯಾಗಿದೆ ಹಾಗೂ ಹೆಚ್ಚು ಹೆಚ್ಚು ಜನರು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಮಿಳುನಾಡಿನ ಮಾದರಿಯಲ್ಲಿ ಉಚಿತ ಔಷಧಿಗಳನ್ನು ಪೂರೈಸುವ ಮತ್ತು ಅದರ ಮಾದರಿಯನ್ನು ಅನುಸರಿಸುವ ಉದ್ದೇಶದಿಂದ ಕೆಎಸ್‌ಎಂಎಸ್ಸಿಎಲ್ (KSMSCL) ಅನ್ನು 2003 ರಲ್ಲಿ ಸ್ಥಾಪಿಸಲಾಗಿದ್ದರೂ, ನಂತರ ಕರ್ನಾಟಕ ರಾಜ್ಯ ಸರ್ಕಾರ ಈ ಉದ್ದೇಶದಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ.

2) **ನಮ್ಮ ಕ್ಲಿನಿಕ್ ಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ರಾತ್ರಿ 9 ಗಂಟೆಯವರಗೆ ತೆರೆದಿರಬೇಕು:** ದುಡಿಯುವ ವರ್ಗದ ಬಹುತೇಕರು ಸಂಜೆ 6 ಗಂಟೆಗೆ ಮರಳುತ್ತಾರೆ, ಆದರೆ ಆ ವೇಳೆಗೆ ಆರೋಗ್ಯ ಕೇಂದ್ರವನ್ನು ಮುಚ್ಚಲಾಗಿರುತ್ತದೆ. ಆದ್ದರಿಂದ 9 ಗಂಟೆಯವರೆಗೂ ಆರೋಗ್ಯ ಸೌಲಭ್ಯಗಳು ಲಭ್ಯವಾಗಬೇಕು.

3) **ಎಲ್ಲಾ ಖಾಲಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು:** ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸಾಕಷ್ಟು ಹಣವನ್ನು ಮಂಜೂರು ಮಾಡಬೇಕು ಮತ್ತು ವೈದ್ಯರು, ತಜ್ಞರು ಮತ್ತು ದಾದಿಯರನ್ನು ನೇಮಕ ಮಾಡಬೇಕು.

4) **ಸಾರ್ವಜನಿಕ ಆರೋಗ್ಯ ಆಸ್ಪತ್ರೆಗಳ ಖಾಸಗೀಕರಣದ ಪ್ರಸ್ತಾವನೆಯನ್ನು ಹಿಂಪಡೆಯಬೇಕು:** ಸುಮಾರು 18 ಜಿಲ್ಲಾ ಆಸ್ಪತ್ರೆಗಳನ್ನು ಖಾಸಗೀಕರಣಗೊಳಿಸುವ ನಿರ್ಧಾರವನ್ನು ಹಿಂದಿನ ರಾಜ್ಯ ಸರ್ಕಾರ ಪ್ರಕಟಿಸಿದೆ. ದಾವಣಗೆರೆಯ ಜಿಲ್ಲಾ ಆಸ್ಪತ್ರೆ ಅಂತಹ ಒಂದು ಉದಾಹರಣೆಯಾಗಿದೆ. ಕಾರ್ಮಿಕ ಸಂಘಗಳು ಮತ್ತು ಜನಪರ ಸಂಘಟನೆಗಳು ಇದನ್ನು ಪ್ರತಿಭಟಿಸಿವೆ. ಈ ಆಸ್ಪತ್ರೆಗಳ ಖಾಸಗೀಕರಣವನ್ನು ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ, ಏಕೆಂದರೆ ಅವು ಖಾಸಿಗೀಕರಣವಾದಲ್ಲಿ, ಶ್ರೀಮಂತರಿಗೆ ಮಾತ್ರ ಆರೋಗ್ಯ ಸೇವೆಗಳು ಲಭ್ಯವಿರುತ್ತವೆ. ಇಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ನಾವು ವಿರೋಧಿಸುವುದಿಲ್ಲ ಆದರೆ ಅದು ರಾಜ್ಯ ಸರ್ಕಾರದಿಂದ ಮಾತ್ರ ಇರಬೇಕು.

5) **ಕರ್ನಾಟಕ ಜನತೆಗೆ "ಆರೋಗ್ಯ ಹಕ್ಕು ಕಾಯ್ದೆ" ಬೇಕು:** ಕರ್ನಾಟಕ ಜನತೆಗೆ Health Right Act ಯನ್ನು ತರುವ ತುರ್ತು ಅಗತ್ಯವನ್ನು ನಿಮ್ಮ ಗಮನಕ್ಕೆ ತರಲು ನಾವು ಬಯಸುತ್ತೇವೆ.

ರಾಜ್ಯದಲ್ಲಿ ಕೆಪಿಎಂಇ (KPME) ಕಾಯ್ದೆಯು ಇದ್ದರೂ ಅದು ಪರಿಣಾಮಕಾರಿಯಾಗಿ ಇಲ್ಲ: ಖಾಸಗಿ ಆರೋಗ್ಯ ವ್ಯವಸ್ಥೆಯು ರೋಗಿಗಳಿಗೆ ಭಾರಿ ಶುಲ್ಕ ವಿಧಿಸುತ್ತಿದೆ ಮತ್ತು ಜನರನ್ನು ಬಡತನಕ್ಕೆ ತಳ್ಳುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲು, "ಆರೋಗ್ಯ ಹಕ್ಕು ಕಾಯ್ದೆಯನ್ನು" ತುರ್ತಾಗಿ ತರುವಂತೆ ನಾವು ನಿಮ್ಮನ್ನು ಒತ್ತಾಯಿಸುತ್ತೇವೆ. ಈ ಮಸೂದೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ದೃಢವಾದ ಇಚ್ಛಾಶಕ್ತಿ ಇರಬೇಕು. ನೀವು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ನಾವು ಬಯಸುತ್ತೇವೆ. ಹಿಂದಿನ ಕಾಂಗ್ರೆಸ್ ಸರ್ಕಾರವು ರಾಜಸ್ಥಾನ್ ದಲ್ಲಿ "ರಾಜಸ್ಥಾನ್ ಆರೋಗ್ಯ ಹಕ್ಕು ಕಾಯ್ದೆ" ಮಸೂದೆಯನ್ನು ಜಾರಿಗೆ ತಂದಿದ್ದು ಭಾರತದಲ್ಲಿ ಇದನ್ನು ಜಾರಿಗೊಳಿಸಿದ ಮೊದಲ ರಾಜ್ಯವಾಗಿದೆ. ಅಲ್ಲದೆ, ಪ್ರಪಂಚದಾದ್ಯಂತ ಎಪ್ಪತ್ತು ದೇಶಗಳು "ಆರೋಗ್ಯ ಹಕ್ಕು ಕಾಯ್ದೆಯನ್ನು" ಜಾರಿಗೊಳಿಸಿವೆ. ಈ ಕಾಯ್ದೆಯು ನಮ್ಮ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರೋಗ್ಯ ರಕ್ಷಣೆಯನ್ನು ಖಾತ್ರಿಪಡಿಸುವುದರಿಂದ ಕರ್ನಾಟಕದ ನಾಗರಿಕರಿಗೆ ಸಾಮಾಜಿಕ ನ್ಯಾಯವನ್ನು ತರುವ "ಆರೋಗ್ಯ ಹಕ್ಕು ಕಾಯ್ದೆಯನ್ನು" ನಾವು ಎದುರು ನೋಡುತ್ತಿದ್ದೇವೆ.

6) **<u>ಹೆಚ್‌ಐವಿ ಸೋಂಕಿತರಿಗೆ ಪೌಷ್ಟಿಕಾಂಶದ ಆಹಾರದ ಪೂರಕಗಳನ್ನು ಒದಗಿಸಿ:</u>** ಕರ್ನಾಟಕದಲ್ಲಿ ಬಹಳಷ್ಟು ಬಡವರು ಹೆಚ್‌ಐವಿ ಸೋಂಕಿತರಾಗಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಕೇವಲ ಎ.ಆರ್.ಟಿ ಮಾತ್ರೆಯನ್ನು ಪಡೆಯುತ್ತಿದ್ದಾರೆ. ಎ.ಆರ್.ಟಿ ಮಾತ್ರೆಯು ಹೆಚ್ಚಿನ ವಿಷಕಾರಿ (ಟಾಕ್ಸಿಕ್) ಯಾಗಿರುವುದರಿಂದ ಸಾಮಾನ್ಯ ಜನರಿಗಿಂತ ಹೆಚ್‌ಐವಿ ಸೋಂಕಿತರು ಪ್ರತಿ ನಿತ್ಯ ಹೆಚ್ಚಿನ ಕ್ಯಾಲರಿಯುಳ್ಳ ಹಾಗೂ ಪೌಷ್ಟಿಕಾಂಶದ ಆಹಾರವನ್ನು ಸೇವಿಸಬೇಕಾಗುತ್ತದೆ. ಬಡವರು ಪೌಷ್ಟಿಕ ಆಹಾರವನ್ನು ಖರೀದಿಸುವುದು ಕನಸಿನ ಮಾತಾಗಿದೆ. ಆಹಾರವನ್ನು ಸೇವಿಸದೇ ಬಹಳಷ್ಟು ಹೆಚ್‌ಐವಿ ಸೋಂಕಿತರು ಇನ್ನಿತರೇ ಅವಕಾಶವಾದಿ ಸೋಂಕು / ಖಾಯಿಲೆಗೆ ತುತ್ತಾಗಿ ಸಾವನ್ನಪ್ಪಿರುವ ಉದಾಹರಣೆಗಳು ಹೆಚ್ಚಿವೆ. ಹೆಚ್‌ಐವಿ ಸೋಂಕಿತರ ಜೀವನ ಮಟ್ಟವನ್ನು ಉತ್ತಮವಾಗಿಸಲು ಹಾಗೂ ಸಾವುಗಳನ್ನು ಕಡಿಮೆ ಮಾಡಲು ಸರ್ಕಾರವು ಉಚಿತವಾಗಿ ಪೌಷ್ಟಿಕ ಆಹಾರದ ಪೂರಕಗಳನ್ನು ಎಲ್ಲಾ ಹೆಚ್‌ಐವಿ ಸೋಂಕಿತರಿಗೆ ನೀಡಬೇಕು.

7) **<u>ಉಚಿತ ಲಿಂಗ ಪರಿವರ್ತನೆ ಶಸ್ತ್ರ ಚಿಕಿತ್ಸೆ (sex reassignment surgery) ಮತ್ತು ಶಸ್ತ್ರ ಚಿಕಿತ್ಸೆಯನಂತರ ಆರು ತಿಂಗಳು ಆರೈಕೆಯ ಬೆಂಬಲ ನೀಡಬೇಕು:</u>** ಬಹುತೇಕ ಲಿಂಗತ್ವ ಅಲ್ಪಸಂಖ್ಯಾತರ ಮೊದಲ ಆಧ್ಯತೆ ಲಿಂಗ ಪರಿವರ್ತನೆ ಶಸ್ತ್ರ ಚಿಕಿತ್ಸೆಗೆ ಒಳಗಾಗುವುದು ಆಗಿರುತ್ತದೆ. ಅದರ ವೆಚ್ಚಕ್ಕಾಗಿಯೇ ಸಮುದಾಯದವರು ಹೆಚ್ಚಿನ ಹಣವನ್ನು ಸಂಪಾದಿಸಲು ಹೆಚ್ಚಿನ ಸಮಯ ಭಿಕ್ಷೆ ಬೇಡುವುದು / ಸೆಕ್ಸ್ ವರ್ಕ್ ಮಾಡುವುದು ಅನಿವಾರ್ಯ ಆಗಿದೆ. ಶಸ್ತ್ರ ಚಿಕಿತ್ಸೆ ನಡೆದ ನಂತರ

ಬಹುತೇಕ ಸಮುದಾಯದವರು ಹಲವು ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆಗಳಿದ್ದು ಅವರಿಗೆ ಆರೈಕೆ ಬಹಳ ಮುಖ್ಯವಾಗಿರುತ್ತದೆ. ಆದರೆ ಕುಟುಂಬದಿಂದ ಹೊರಬಂದಿರುವ ಸಮುದಾಯದವರು ಆರೈಕೆ ಯಿಂದ ವಂಚಿತರಾಗುತ್ತಿದ್ದಾರೆ. ಆದ ಕಾರಣ ಸರ್ಕಾರವು ಉಚಿತ ಲಿಂಗ ಪರಿವರ್ತನ ಶಸ್ತ್ರ ಚಿಕಿತ್ಸೆ (sex reassignment surgery) ಮತ್ತು ಶಸ್ತ್ರ ಚಿಕಿತ್ಸೆಯನಂತರ ಆರು ತಿಂಗಳು ಆರೈಕೆಯ ಬೆಂಬಲವನ್ನು ನೀಡಬೇಕು.

**ತಮ್ಮ ವಿಶ್ವಾಸಿಗಳು**